**ಒ.ಎಸ್. ನಂ. 402/2016 ಪಿ. ಡಬ್ಲೂ - 1**

ದಿನಾಂಕಃ **19.03.2024** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀಸವಾಲು ಃ 2 ನೇಪ್ರತಿವಾದಿ ಪರ, ಶ್ರೀ ಎಂ ವೈ ಎನ್ ವಕೀಲರಿಂದ,**

ಆಲೇನಹಳ್ಳಿ ಗ್ರಾಮದ ಸ.ನಂ.14 ರಲ್ಲಿ ಸುಮಾರು 80 ಎಕರೆಗಿಂತ ಹೆಚ್ಚು ಜಮೀನು ಇದೆ. ಅದು ಸರ್ಕಾರಿ ಗೋಮಾಳ ಎಂದರೆ ಇರಬಹುದು. ಸದರಿ ಸ.ನಂ.ನಲ್ಲಿ ಹಲವಾರು ಜನ ಅನಧಿಕೃತ ಸಾಗುವಳಿ ಮಾಡುತ್ತಿದ್ದಾರೆಂದರೆ ಸರಿ. ಅದೇ ರೀತಿ 2 ನೇ ಪ್ರತಿವಾದಿ ಸಹ ಅನಧಿಕೃತ ಸಾಗುವಳಿ ಮಾಡುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದ ಪತ್ರದ ಷೆಡ್ಯೂಲ್ ನಲ್ಲಿ ಹೇಳಿರುವಂತೆ ಚಕ್ಕುಬಂದಿಃ ಪಶ್ಚಿಮಕ್ಕೆ ಯಾವುದೇ ರಾಜಯ್ಯ ಎಂಬುವವರ ಜಮೀನು ಇಲ್ಲ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ನಿಂಗಪ್ಪಗೌಡ ಎಂಬುವವರ ಜಮೀನು ಇದೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಯಾವುದೇ ಚ್ಕುಬಂದಿ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ1 ರಲ್ಲಿ ನಕಾಶೆಯಲ್ಲಿರುವ ಬ್ಲಾಕ್ ನಂಬರ್ 10 ರಂತೆ ಎಂದು ಬರೆಯಲಾಗಿದ್ದು ಆ ಕುರಿತು ಯಾವುದೇ ನಕ್ಷೆ ಹಾಜರುಮಾಡಿಲ್ಲ ಎಂದರೆ ಸರಿ. ನಿಪಿ 1 ದಾವಾಸ್ತಿಗೆ ಸಂಬಂದ ಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ದಾವಾ ಸ.ನಂ.ನ ದುರಸ್ತಿ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಪ್ರಸ್ತುತ ಸ.ನಂ.14 ರ 101 ಎಕರೆ ಜಮೀನು ಒಂದೇ ಆರ್ ಟಿಸಿ ಬರುತ್ತಿದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 1, 2 ನೇ ಪ್ರತಿವಾದಿಯರು ಸಾಗುವಳಿ ಮಾಡುತ್ತಿದ್ದು ತೆಂಗಿನ ತೋಟ ಮಾಡಿದ್ದಾರೆಂದರೆ ಸರಿಯಲ್ಲ. ನಿಪಿ1 ನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿಯರು ಸಾಗುವಳಿ ಮಾಡಿರುವ ಜಮೀನಿಗೆ ನಾನು ಹಕು ಮಾಡುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ದಾವಾ ಷೆಡ್ಯೂಲ್ ಚಕ್ಕುಬಂದಿ ತೋರಿಸುವಂತಹ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಯ ಸ್ವಾದೀನಕ್ಕೆ ಅಡ್ಡಿಪಡಿಸಿದ ದಿನಾಂಕ ಹೇಳಲಾಗುವುದಿಲ್ಲ. ನಿಪಿ1 ರಿಂದ 10 ದಾವಾ ಸ್ವತ್ತಿಗೆ ಸಂಬಂದಪಟ್ಟ ದಾಖಲೆಗಳಲ್ಲ ಎಂದರೆ ಸರಿಯಲ್ಲ. ಮಂಜೂರಾತಿ ಸಮಯದಲ್ಲಿ ತಯಾರಿಸಲಾದ ನಕಾಶೆಯನ್ನು ಹಾಜರುಪಡಿಸಿದರೆ ವಾಸ್ತಾಂವಾಂಶ ತಿಳಿಯುತ್ತದೆಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದ ಚಕ್ಕುಬಂದಿಯಲ್ಲಿರುವ ಜಮೀನು ಪ್ರತಿವಾದಿಯರು ಸಾಗುವಳಿ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಪ್ರತಿವಾದಿಯರು ಸ್ವಾದೀನ ಇರುವ ಕಾರಣ ತೊಂದರೆ ಕೊಡುವ ಪ್ರಮೇಯ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮಗೆ ಯಾವುದೇ ರೀತಿ ಮಂಜೂರಾಗಿಲ್ಲ ಎಂದರೆ ಸರಿಯಲ್ಲ.

**1 ಮತ್ತು 3 ನೇ ಪ್ರತಿವಾದಿಯರ ಪರ ವಕೀಲರು ಗೈರು ಹಾಜರಿದ್ದು ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. 4 ನೇ ಪ್ರತಿವಾದಿ ಪರ ವಕೀಲರು ಮೇಲ್ಕಂಡ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಃ ಇಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಕೇ ಸ ಅದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**